ಮತ್ತು ಫ್ಯಾಷನ್ ಷೋಗಳಲ್ಲಿ ತೊಡಗಿಸಿಕೊಂಡಳು. ಅಮ್ಮ ತುಂಬಾ ಸುಂದರಿಯೂ ಆಗಿದ್ದರಿಂದ ಒಂದೆರಡು ಸಿನಿಮಾಗಳಲ್ಲೂ ನಟಿಸಿದ್ದಳು. ಸ್ಫುರದ್ರೂಪಿಯಾಗಿದ್ದ ಸೂರಜ್ ಅಗರವಾಲ್ ಷೇರುಮಾರುಕಟ್ಟೆಯ ಕಿಂಗ್ ಪಿನ್‌ಗಳಲ್ಲಿ ಒಬ್ಬನಾಗಿದ್ದ. ಕ್ರಿಕೆಟ್ ಪ್ರೇಮಿಯಾಗಿದ್ದ ಆತ ಅಮ್ಮನೊಂದಿಗೆ ಪ್ರಪಂಚದ ಯಾವುದೇ ಭಾಗದಲ್ಲಿ ಅಂತರರಾಷ್ಟ್ರೀಯ ಪಂದ್ಯಗಳಾದರೂ ನೋಡಲು ಹೋಗುತ್ತಿದ್ದ. ಅಮ್ಮನಿಗಾಗಿ ಬಾಂದ್ರಾದ ಗೆಲಾಕ್ಸಿ ಅಪಾರ್ಟ್ಮೆಂಟ್‌ನಲ್ಲಿ ಇಪ್ಪತ್ತು ಕೋಟಿ ರೂಪಾಯಿ ಬೆಲೆ ಬಾಳುವ ಮೂರು ಬೆಡ್ ರೂಮಿನ ಐಷಾರಾಮಿ ಫ್ಲಾಟನ್ನು ಖರೀದಿಸಿ ನಮ್ಮೊಂದಿಗೆ ಬದುಕತೊಡಗಿದ. ನನಗೆ ಜನ್ಮ ಕೊಟ್ಟ ತಂದೆಯಲ್ಲವಾದ್ದರಿಂದ ಆತನೊಂದಿಗೆ ಪಿತೃ ಸಂವೇದನೆಗಳೇನೂ ಹುಟ್ಟಲಿಲ್ಲ. ಅಮ್ಮನಿಗೆ ನಾನು ತನ್ನಂತೆ ಗಗನಸಖಿಯಾಗಬೇಕೆಂಬ ಆಸೆಯಿದ್ದರಿಂದ ಹದಿನೇಳು ವರ್ಷಕ್ಕೆ ಈಗ ಕೆಲಸ ಮಾಡುವ ವಿಮಾನಯಾನ ಕಂಪನಿಯಲ್ಲಿ ಗಗನಸಖಿಯಾಗಿ ಸೇರಿಕೊಂಡೆ. ಅಮ್ಮ ಫ್ಯಾಷನ್ ಷೋಗಳಿಗೆ ಡಿಸೈನಿಂಗ್ ಮಾಡಲು ಯುರೋಪ್ ದೇಶಗಳಿಗೆ ಹದಿನೈದಿಪ್ಪತ್ತು ದಿನ ರೆಗ್ಯುಲರ್ ಆಗಿ ಹೋಗುತ್ತಿದ್ದಳು. ಅಂಥ ಸಂದರ್ಭಗಳಲ್ಲಿ ಸೂರಜ್ ಅಗರವಾಲ್ ಮತ್ತು ನಾನು ಇಬ್ಬರೇ ಇರುತ್ತಿದ್ದುದ್ದರಿಂದ ಸಿನಿಮಾ, ಹೋಟೆಲ್‌ಗಳಿಗೆ ನನ್ನನ್ನು ಕರೆದುಕೊಂಡು ಹೋಗುತ್ತಿದ್ದ. ಒಂದು ರೀತಿಯ ಫ್ರೆಂಡ್ಸ್ ಆಗಿಬಿಟ್ಟಿದ್ದೆವು. ಅಂಥ ಒಂದು ಗಳಿಗೆಯಲ್ಲಿ ನಾನು ಮತ್ತು ಆತ ಒಬ್ಬರಿಗೊಬ್ಬರು ಅನುರಕ್ತರಾಗಿ ದೈಹಿಕ ಸಂಬಂಧ ಕೂಡ ನಡೆದು ಹೋಯಿತು. ಅದು ರಿಪೀಟ್ ಆಗುತ್ತಿತ್ತು. ಅಮ್ಮ ಆ ಬಾರಿ ಟೊರೆಂಟೊಗೆ ಹೋದಾಗ ನಮ್ಮಿಬ್ಬರನ್ನೂ ಕರೆದುಕೊಂಡು ಹೋಗಿದ್ದಳು. ಅವಳು ಫ್ಯಾಷನ್ ಷೋನಲ್ಲಿ ಬಿಜಿಯಾಗಿದ್ದರೆ ನಾವು ಒಬ್ಬರಿಂದೊಬ್ಬರು ಸುಖವನ್ನು ಕೊಳ್ಳೆ ಹೊಡೆಯುತ್ತಿದ್ದೆವು. ಹದಿಹರೆಯದ ಬಯಕೆಗಳ ಮಳೆಯಲ್ಲಿ ನನ್ನ ತನುಮನಗಳು ತೊಯ್ದು ತೊಪ್ಪೆಯಾಗಿದ್ದವು. ಒಂದು ಬಿಡುವಿನ ದಿನ ಅಲ್ಲಿಂದ ನಯಾಗರ ನೋಡಲು ಹೋಗಿದ್ದೆವು. ಕೆನಡ ಕಡೆಯ ಹಾರ್ಸ್ ಶೂ ಫಾಲ್ಸ್ ಬಳಿ ನಿಂತು ನಯಾಗರದ ರುದ್ರ ರಮಣೀಯತೆಯನ್ನು ಕಣ್ತುಂಬಿಕೊಳ್ಳುತ್ತಿರುವಾಗ ಅಮ್ಮನ ಹತ್ತಿರ ಸತ್ಯವನ್ನು ಹೇಳಬೇಕೆನಿಸಿತು. ಫಾಲ್ಸ್‌ನ ಕಲರವದಲ್ಲಿ ಅಮ್ಮನ ಬಳಿ 'ಸಾರಿ ಅಮ್ಮ ನಾನು ಕ್ಯಾರಿಯಿಂಗ್... ಥ್ರೀ ಮಂಥ್ಸ್ ನೌ' ಎಂದೆ. ಅಮ್ಮ ಗಾಬರಿಯಿಂದ 'how is that, who is that' ಎಂದು ಭಯದಿಂದ ಕಂಪಿಸುತ್ತಾ ಸಣ್ಣಗೆ ಚೀರಿದ್ದಳು. ನಾನು ಅಲ್ಲೇ ನಿಂತಿದ್ದ ಸೂರಜ್ ಅಗರವಾಲನ ಕಡೆ ನೋಡಿದ್ದೆ. ಸಡನ್ ಆಗಿ ಕುಸಿದು ಬಿದ್ದ ಅಮ್ಮ ಫಾಲ್ಸ್ ಕಡೆ ವಾಲಿಕೊಂಡು ಜಲಪಾತದ ಮಂಜು ಬುಗ್ಗೆಯಲ್ಲಿ ಕರಗಿ ಶಾಶ್ವತವಾಗಿ ಮರೆಯಾಗಿ ಹೋಗಿದ್ದಳು. ಅಮ್ಮನನ್ನು ನಾನು ತುಂಬಾ ಪ್ರೀತಿಸುತ್ತಿದ್ದೆ. ಆದ್ದರಿಂದಲೇ ಶರ್ವಾಣಿ ಎಂಬ ಅಮ್ಮನ ಹೆಸರನ್ನು ನನ್ನ ಹೆಸರಿನ ಜೊತೆ ಸೇರಿಸಿಕೊಂಡಿದ್ದೇನೆ. ಆ ಮೂಲಕ ನಾನು ಮಾಡಿದ ತಪ್ಪಿಗೆ ಪ್ರತಿಕ್ಷಣ ನನ್ನನ್ನು ನಾನೇ ದಂಡಿಸಿಕೊಳ್ಳುತ್ತಾ ಪ್ರಾಯಶ್ಚಿತ್ತ ಅನುಭವಿಸುತ್ತಿದ್ದೇನೆ. ಇವೆಲ್ಲವನ್ನು ಮೀರಲು ವಿಮಾನದಲ್ಲಿ ಸದಾ ಆಕಾಶದಲ್ಲಿ ಹಾರುತ್ತಿದ್ದೇನೆ ಮೇಲೆ ನಗುತ್ತಾ, ಒಳಗೆ ಅಳುತ್ತಾ...' ಸ್ಮಿತಾ ಶರ್ವಾಣಿಯ ಬಾಯಿಂದ ಮಾತು ನಿಂತು ಜೋರಾಗಿ ಬಿಕ್ಕಳಿಸುತ್ತಿದ್ದಳು. ಕೆನ್ನೆಗಳ ಮೇಲೆ ಕಣ್ಣೀರು ಹರಿಯುತ್ತಿತ್ತು. ಸಿದ್ಧಾರ್ಥ ಕುಮಾರ್ ಎದ್ದು ಹೋಗಿ ಅವಳ ತಲೆ ನೇವರಿಸುತ್ತಾ 'ಐಯಾಮ್ ಸೋ ಸಾರಿ. ನಿಮ್ಮನ್ನು ಏನೂ ಕೇಳಬಾರದಿತ್ತು, ಕೇಳಿಬಿಟ್ಟೆ. ನಾವು ಲಂಡನ್ನಿನಲ್ಲಿ ನಮ್ಮ ಕಂಪನಿಯ ಬ್ರಾಂಚನ್ನು ಮುಂದಿನ ವರ್ಷ ಪ್ರಾರಂಭಿಸುತ್ತಿದ್ದೇವೆ. ನಿಮಗೆ ಅಭ್ಯಂತರವಿಲ್ಲದಿದ್ದರೆ ಅದಕ್ಕೆ ನಿಮ್ಮ ಮಗಳನ್ನೇ ಸಿಇಒ ಆಗಿ ನೇಮಿಸುತ್ತೇನೆ. ನೀವೂ ಸಹ ಅಲ್ಲೇ ಹೋಗಿ ನಿಮ್ಮ ಮಗಳೊಂದಿಗೆ ನೆಲೆಸಿಬಿಡಬಹುದು. ನನ್ನಲ್ಲಿ ಬದುಕಿನ ಬಗ್ಗೆ ಆತ್ಮವಿಶ್ವಾಸ ಹುಟ್ಟಲು ಕಾರಣವಾಗಿದ್ದಕ್ಕೆ ನನ್ನ ಕಾಣಿಕೆಯಷ್ಟೇ ಮತ್ತು ಇದಕ್ಕಾಗಿ ಯಾವ ಪ್ರತಿಫಲಾಪೇಕ್ಷೆಯನ್ನೂ ನಾನು ಬಯಸುವುದಿಲ್ಲ. ಇಲ್ಲಿ ಯಾವುದೂ ಮುಖ್ಯವಲ್ಲ, ಯಾವುದೂ ಅಮುಖ್ಯವಲ್ಲ ಮತ್ತು ಯಾರೂ ಮುಖ್ಯರಲ್ಲ, ಯಾರೂ ಅಮುಖ್ಯರಲ್ಲ. ಎಲ್ಲರ ಬದುಕೂ ಒಂದು ಜೈವಿಕ ಪ್ರಕ್ರಿಯೆಯಷ್ಟೆ ಮತ್ತು ಆಕಸ್ಮಿಕವಷ್ಟೆ ಅನ್ನಿಸುತ್ತದೆ' ಎಂದವನ ಕಣ್ಣಲ್ಲೂ ನೀರು ಇಣುಕಿತ್ತು. ಜೋರಾದ ಸದ್ದು ಕೇಳಿ ತಲೆ ಎತ್ತಿ ಆಕಾಶದ ಕಡೆ ನೋಡಿದ ಸಿದ್ಧಾರ್ಥ. ನಕ್ಷತ್ರಗಳ ಸಾಗರದಲ್ಲಿ ಲೋಹದ ಹಕ್ಕಿಯೊಂದು ಮಿನುಮಿನುಗುತ್ತಾ ಸಂಭ್ರಮದಿಂದ ಹಾರುತ್ತಿರುವುದು ಕಣ್ಣಿಗೆ ಬಿತ್ತು!

●